# ಡಿಟೆಕ್ಟಿವ್ ಖತ್ರಿ... ಉತ್ಸಾಹ ಹಿಂಗ್ಯೈತ್ರಿ!

**ಜಿಯಾಲಜಿ,** ಕೆಮಿಸ್ಟ್ರಿ ಬಾಟನಿಯನ್ನು ವಿಜ್ಞಾನ ಪದವಿಯಲ್ಲಿ ಓದಿದ ಆಕೃತಿ ಖತ್ರಿ ಅದೊಂದು ದಿನ ಪತ್ರಿಕೆಯಲ್ಲಿ ಜಾಹೀರಾತು ಕಂಡರು. 'ಡಿಟೆಕ್ಟಿವ್ ಏಜೆನ್ಸಿಯಲ್ಲಿ ಕೆಲಸ' ಎಂಬ ಒಕ್ಕಣೆ ಅವರ ಗಮನ ಸೆಳೆಯಿತು. ದೆಹಲಿ ವಿಶ್ವವಿದ್ಯಾಲಯದಲ್ಲಿ ಕಲಿತಿದ್ದ ಹುಡುಗಿಗೆ 19ರ ಹರೆಯದಲ್ಲೇ ಜಾಜೂಸಿ ಮಾಡಬೇಕೆಂಬ ಹಂಬಲ. ಅರ್ಜಿ ಗುಜರಾಯಿಸಿದರು. ಸೀದಾ ಸಂದರ್ಶನಕ್ಕೆ ಕರೆಬಂತು. ಎದುರಾದದ್ದು ಎರಡೇ ಪ್ರಶ್ನೆಗಳು – ಒಂದು, 'ಗಂಡ–ಹೆಂಡತಿಯ ನಡುವೆ ವೈಮನಸ್ಸು ಇರುವ ಕಾರಣಕ್ಕೆ ಕೇಸೊಂದು ಬಂದಾಗ ಅದನ್ನು ಹೇಗೆ ನಿಭಾಯಿಸುವೆ?' ಇನ್ನೊಂದು, 'ಕೆಲಸ ಕೊಟ್ಟರೆ ಯಾವಾಗ ಸೇರಿಕೊಳ್ಳುವೆ?' 'ಆ ಕ್ಷಣದಿಂದಲೇ ಕೆಲಸಕ್ಕೆ ಸೇರಲು ಸಿದ್ಧ' ಎಂಬ ಆಕೃತಿಯ ಉತ್ತರ ಸಂದರ್ಶಕರಿಗೆ ಹಿಡಿಸಿತು. ಹಾಗೆ ವೃತ್ತಿ ಪ್ರಾರಂಭಿಸಿದ ಆಕೃತಿ ಖತ್ರಿ, ದೆಹಲಿಯಲ್ಲಿಯೇ ಡಿಟೆಕ್ಟಿವ್ ತಂತ್ರಗಳಲ್ಲಿ ಕೈಪಳಗಿಸಿಕೊಂಡರು.

ತಮ್ಮದೇ ವೀನಸ್ ಡಿಟೆಕ್ಟಿವ್ ಏಜೆನ್ಸಿ ಸ್ಥಾಪಿಸಿದಾಗ ಅವರಿಗಿನ್ನೂ ಇಪ್ಪತ್ತನಾಲ್ಕು ವಯಸ್ಸು. ನೋಯ್ಡಾದಲ್ಲಿ ಕೇಂದ್ರ ಕಚೇರಿ ಇರುವ ಈ ಡಿಟೆಕ್ಟಿವ್ ಸಂಸ್ಥೆಯು ಬೆಂಗಳೂರು, ಮುಂಬೈ, ಪುಣೆ, ಜೈಪುರ, ಹೈದರಾಬಾದ್, ಚಂಡೀಗಢ ಹಾಗೂ ಕೋಲ್ಕತ್ತದಲ್ಲೂ ಶಾಖೆಗಳನ್ನು ಹೊಂದಿದೆ. ಆಕೃತಿ 'ಸುಧಾ' ಜತೆ ತಮ್ಮ ಪಯಣ ಹಾಗೂ ಡಿಟೆಕ್ಟಿವ್ ಕ್ಷೇತ್ರದ 'ಟ್ರೆಂಡ್'ಗಳನ್ನು ಹಂಚಿಕೊಂಡರು.

'ನಾವು ಅಪ್ಪಿತಪ್ಪಿಯೂ ಪೊಲೀಸ್ ಕೇಸುಗಳನ್ನು ಪರಿಗಣಿಸುವುದಿಲ್ಲ' ಎಂಬ ಅವರ ಮಾತಿನಲ್ಲೇ ಡಿಟೆಕ್ಟಿವ್ ಏಜೆನ್ಸಿಗಳ ಮಿತಿ ಹಾಗೂ ಉದ್ದೇಶ ಅಡಗಿದೆ. ಪುರಿ ಎಂಬ ಗುರುವಿನಿಂದ ಐದು ವರ್ಷ ಡಿಟೆಕ್ಟಿವ್ ಪಟ್ಟುಗಳನ್ನು ಕಲಿತ ಆಕೃತಿ, ಆಮೇಲೆ ಪುರುಷಪ್ರಧಾನವಾದ ಈ ಕ್ಷೇತ್ರದಲ್ಲಿ ಮಹಿಳೆಯರದ್ದೇ ಹೆಜ್ಜೆಗುರುತನ್ನು ಢಾಳಾಗಿಸಬೇಕು ಎಂದು ಸಂಕಲ್ಪ ಮಾಡಿದರು.

ಇವರ ಕಂಪನಿಯಲ್ಲಿ 80 ಸಿಬ್ಬಂದಿ ಇದ್ದಾರೆ. ಆ ಪೈಕಿ ಶೇ 70ರಷ್ಟು ಮಹಿಳೆಯರು. ನಡುರಾತ್ರಿಯಲ್ಲಿ ಅಡ್ಡಾಡಲೇಬೇಕಾದ ಕೆಲವು ನಾಜೂಕಾದ ಕೆಲಸಗಳನ್ನು ಮಾಡಲು ಪುರುಷರು ಅನಿವಾರ್ಯ. ಈಗೀಗ ರಾತ್ರಿ ಹೊತ್ತೂ ಕೆಲಸ ಮಾಡುವ ಉತ್ಸಾಹವನ್ನು ಈ ಕ್ಷೇತ್ರದಲ್ಲಿ ಹೆಣ್ಣುಮಕ್ಕಳು ತೋರಿಸುತ್ತಿರುವುದು ಆಕೃತಿ ಉತ್ಸಾಹವನ್ನು ಹೆಚ್ಚಿಸಿದೆ.

'ಬೌದ್ಧಿಕ ಆಸ್ತಿ ಹಕ್ಕಿನ' ಪ್ರಕರಣಗಳಲ್ಲಿ ದಾಳಿ ನಡೆಸುವಾಗ ಮಾತ್ರ ಪೊಲೀಸರ ನೆರವನ್ನು ಪಡೆಯುತ್ತೇವೆ. ಆ ಅಧಿಕಾರ ನಮಗೆ ಇರುವುದಿಲ್ಲ. ಉಳಿದಂತೆ ನಾವು ಪೊಲೀಸರ ಜತೆಗೆ ಯಾವ ಹಂತದಲ್ಲೂ ಕೆಲಸ ಮಾಡುವುದಿಲ್ಲ. ನಮ್ಮದ್ದು ಪ್ರತ್ಯೇಕ ಕಾರ್ಯತಂತ್ರ' ಎನ್ನುತ್ತಾರೆ ಆಕೃತಿ.

ಕಾದಂಬರಿ–ಕಥೆ, ಸಿನಿಮಾ–ಧಾರಾವಾಹಿಗಳಲ್ಲಿ ಪತ್ತೇದಾರರನ್ನು ನಾಯಕರಾಗಿ ಕಂಡಿದ್ದೇವೆ. ನಿಜಬದುಕಿನಲ್ಲೂ ಅಷ್ಟೇ ರೋಚಕವಾದ ಕೆಲಸ ಇದಾಗಿದೆಯೇ ಎಂಬ ಪ್ರಶ್ನೆಗೆ ಆಕೃತಿ ಮೊದಲು ನಗುವಿನ ಉತ್ತರ ಕೊಟ್ಟರು. ಸವಾಲುಗಳನ್ನು ಒಡ್ಡುವ ಈ ಕೆಲಸದಲ್ಲಿ ಒಂದಿಷ್ಟು ಪಟ್ಟುಗಳನ್ನು ಕರಗತ ಮಾಡಿಕೊಂಡರೆ ಆಮೇಲೆ ಕೆಲಸ ಮಾಡಬೇಕಾದ ಕ್ರಮ ಸ್ಪಷ್ಟವಾಗಿ ಗೊತ್ತಾಗುತ್ತದೆ ಎನ್ನುತ್ತಾರೆ ಅವರು.

ಮೆಟ್ರೊ ನಗರಗಳಲ್ಲೇ ಹೆಚ್ಚಾಗಿ ಜನ ಡಿಟೆಕ್ಟಿವ್ ಏಜೆನ್ಸಿಗಳನ್ನು ನೆಚ್ಚಿಕೊಳ್ಳುತ್ತಾರೆ. ಸಣ್ಣ ನಗರಗಳು, ಪಟ್ಟಣಗಳಲ್ಲಿ ಸ್ವಯಂ 'ನೈತಿಕ ಪೊಲೀಸ್‌ಗಿರಿ'ಯ ವ್ಯವಸ್ಥೆ ಇರುವುದರಿಂದ ಅಲ್ಲಿನ ಗ್ರಾಹಕರು ತಮಗೆ ಅಪರೂಪ ಎನ್ನುತ್ತಾರೆ. ಆದರೂ ಈಗೀಗ ಸಣ್ಣ ಪುಟ್ಟ ನಗರಗಳ ಜನರೂ ಸಂಬಂಧಗಳ ಕುರಿತ ಅನುಮಾನಗಳನ್ನು ಬಗೆಹರಿಸಿಕೊಳ್ಳಲು ತಮ್ಮ ಏಜೆನ್ಸಿಯನ್ನು ಎಡತಾಕತೊಡಗಿರುವುದು ಇವರಲ್ಲೂ ಅಚ್ಚರಿ ಮೂಡಿಸಿದೆ.

ಸಾಮಾಜಿಕ ಜಾಲತಾಣಗಳು ವ್ಯಾಪಕವಾದ ಮೇಲೆ ಸಂಶಯಾಸ್ಪದ ಪ್ರಕರಣಗಳೂ ಹೆಚ್ಚಾಗಿವೆ ಎನ್ನುವುದು ಆಕೃತಿ ಅನುಭವದ ಮಾತು.

'ವಾಟ್ಸ್‌ಆ್ಯಪ್ ಸಂದೇಶ ಕಳುಹಿಸುವುದು ಉಚಿತ. ಹೀಗಾಗಿ ಈಗ ಸಂಬಂಧಗಳು ಕುದುರಿಕೊಳ್ಳುವ ಸ್ವರೂಪವೇ ಬದಲಾಗಿದೆ. ಸಂದೇಶಗಳಿಂದಲೇ ಎಷ್ಟೋ ಜನ ಮೋಸಹೋಗುತ್ತಾರೆ. ಆಮೇಲೆ ಅನುಮಾನ ಹುತ್ತಗಟ್ಟುತ್ತದೆ. ಇದಲ್ಲದೆ ಫೇಸ್‌ಬುಕ್, ಟ್ವಿಟ್ಟರ್, ಇನ್‌ಸ್ಟಾಗ್ರಾಂನಲ್ಲಿನ ಚಟುವಟಿಕೆ ಕೂಡ ಅನುಮಾನ ಹುಟ್ಟಿಸುವ ಸಾಧ್ಯತೆ ಇದೆ. ಮನೆಯಲ್ಲೇ ಉತ್ತರ ಕಂಡುಕೊಳ್ಳಲಾರದವರು ನಮ್ಮ ಬಳಿಗೆ ಬರುತ್ತಾರೆ. ಟಿ.ವಿ. ಧಾರಾವಾಹಿಗಳಲ್ಲಿ ಪತ್ತೇದಾರರ ಬಳಸುವುದನ್ನು ಕಂಡು







ವಿಕ್ರಮ್ ಸಿಂಗ್. ಸಲ್ವಂತ್ ಸಿಂಗ್‌ಗೆ ಐಷಾರಾಮಿ ಕಾರುಗಳ ಶೋಕಿ ಇತ್ತು. ಭಾರತದಲ್ಲಿ ಆ ಕಾಲಘಟ್ಟದಲ್ಲಿ ಅಂತಹ ಕಾರುಗಳನ್ನು ಯಾರು ಯಾರು ಕೊಂಡರು ಎಂದು ಅವರು ಹುಡುಕಾಡಿದರು. ಆಗ ಸಿಕ್ಕ ಹೆಸರುಗಳ ಪಟ್ಟಿಯಲ್ಲಿ ಸಲ್ವಂತ್‌ನದ್ದೂ ಸೇರಿತ್ತು. ಅವನನ್ನು ಹಿಡಿಯಲು ಅಷ್ಟು ಸಾಕಾಯಿತು. ಈ ಪ್ರಕರಣವನ್ನು ಭೇದಿಸಿದ ಕಾರಣಕ್ಕೆ ಕುಂವರ್ ವಿಕ್ರಮ್ ಸಿಂಗ್‌ಗೆ 'ವರ್ಷದ ಶ್ರೇಷ್ಠ ಪತ್ತೇದಾರಿ' ಎಂಬ ಗೌರವವನ್ನು 2006ರಲ್ಲಿ ವಿಶ್ವ ಪತ್ತೇದಾರಿಗಳ ಸಂಸ್ಥೆ (ವರ್ಲ್ಡ್ ಅಸೋಸಿಯೇಷನ್ ಆಫ್ ಡಿಟೆಕ್ಟಿವ್ಸ್ – ಡಬ್ಲ್ಯುಎಡಿ) ನೀಡಿತು. ಸಲ್ವಂತ್ ಸಿಂಗ್‌ಗೆ ಸಿಂಗಪುರದಲ್ಲಿ 20 ವರ್ಷಗಳ ಕಠಿಣ ಜೈಲುಶಿಕ್ಷೆ ಆಯಿತು. ಇದೇ ಪ್ರಕರಣವನ್ನು ಆಧರಿಸಿ 'ದಿ ಕೇಸ್ ಆಫ್ ಮಿಸ್ಸಿಂಗ್ ಸರ್ವೆಂಟ್' ಎಂಬ ಕೃತಿಯನ್ನು ಬ್ರಿಟಿಷ್ ಲೇಖಕ ಟಾರ್ನ್‌ಕ್ವಿನ್ ಹಾಲ್ 2009ರಲ್ಲಿ ಬರೆದ ಎಂದು ಹೇಳಲಾಗುತ್ತದೆ.

ಸಲ್ವಂತ್ ಸಿಂಗ್ ಪ್ರಕರಣವನ್ನು ಭೇದಿಸಿ ಜನಪ್ರಿಯರಾದ ಕುಂವರ್ ವಿಕ್ರಮ್ ಸಿಂಗ್ ಆಮೇಲೆ ಲಾನ್ಸರ್ಸ್ ನೆಟ್‌ವರ್ಕ್ ಲಿಮಿಟೆಡ್ ಎಂಬ 'ಆತಂಕ ನಿವಾರಣಾ ಸಲಹಾ ಕಂಪನಿ'ಯನ್ನೇ ಹುಟ್ಟುಹಾಕಿದ್ದು ಗಮನಾರ್ಹ. ಎನ್. ನರಸಿಂಹಯ್ಯನವರು 1950ರ ದಶಕದ ನಂತರ ಉಣಬಡಿಸಿದ ಪತ್ತೇದಾರಿ ಕಾದಂಬರಿಗಳ ಪುರುಷೋತ್ತಮನ ಪಾತ್ರ ಓದಿಕೊಂಡು ಬೆಳೆದ ಆ ಕಾಲದ ಯುವಕರಿಗೂ ಈಗ ಇಂತಹ ಪ್ರಕರಣಗಳನ್ನು ಓದಿ–ಕೇಳಿ ಅಚ್ಚರಿಯಾಗಬಹುದು. ಬ್ರಿಟಿಷ್ ಲೇಖಕ ಆರ್ಥರ್ ಕೊನನ್ ಡಾಯ್ಲ್ 1880ರ ದಶಕದ ಕೊನೆಯಲ್ಲಿ ಸೃಷ್ಟಿಸಿದ ಶೆರ್ಲಾಕ್ ಹೋಮ್ಸ್ ಎಂಬ ಪತ್ತೇದಾರಿ ಶೂರನ ಪಾತ್ರವನ್ನೇ ನಾವು ರೂಪಕವಾಗಿ ಈಗಲೂ ಉಜ್ಜುತ್ತಿದ್ದೇವೆ. ಯಾಕೆಂದರೆ, ವಿಧಿ ವಿಜ್ಞಾನ ಪ್ರಯೋಗಾಲಯವನ್ನು ಅವನು ಬಳಸಿಕೊಳ್ಳುವ ರೀತಿ, ಅವನ ತಾರ್ಕಿಕ ನಿಲುವುಗಳು, ಸೂಕ್ಷ್ಮಗಳ ಮೇಲೆ ದುರ್ಬೀನು ಹಾಕುವ ಪರಿ ಇವೆಲ್ಲವೂ ಎಷ್ಟೋ ಪತ್ತೇದಾರಿಗಳಿಗೆ ಅನುಕರಣೀಯವಂತೂ ಹೌದು.

ಭಾರತದಲ್ಲಿ ಎಷ್ಟು ಪತ್ತೇದಾರಿಗಳಿದ್ದಾರೆ ಎಂದು